

# ಮುಕ್ತಿ ಮಾರ್ಗ

**ಮೆಕೆರಿಯಸ್** ಎಂಬ ಸಂತ ನಿದ್ದ. ಒಂದು ದಿನ ಭಕ್ತನೊಬ್ಬ ಅವನೆಡೆಗೆ ಬಂದ. ಭಕ್ತಿಯಿಂದ ಕೈ ಮುಗಿದು ಕೇಳಿಕೊಂಡ, "ನನಗೆ ಮುಕ್ತಿಮಾರ್ಗವನ್ನು ತೋರಿಸಿ" ಎಂದು.


ಸಂತನೆಂದ : "ಸುಡುಗಾಡಿಗೆ ಹೋಗಿ ಅತ್ಯಂತ ಕಟುವಾಗಿ ಬೈದು ಬಾ."

ಅದೇ ರೀತಿ ಭಕ್ತನು ಒಂದು ದಿನವಿಡೀ ಬೈದು ಬಂದನು. ಈಗ ಸಂತನೆಂದ : "ಈಗ ಹೋಗು, ಸುಡುಗಾಡಿಗೆ ಹೋಗಿ ಮನ ಬಂದಂತೆ ಹೊಗಳಿ ಬಾ."

ಭಕ್ತನು ಹಾಗೆಯೇ ಮಾಡಿ ಸಂತನ ಮುಂದೆ ಬಂದು ನಿಂತನು. ಸಂತನು ಅವನನ್ನು ವಿಚಾರಿಸಿದ: "ನಿನ್ನ ಬೈಗಳು ಕೇಳಿ ಯಾರಿಗೂ ನೋವಾಗಲಿಲ್ಲವೇ? ನಿನ್ನ ಹೊಗಳಿಕೆಯಿಂದ ಯಾರಿಗೂ ಸಂತೋಷವಾಗಲಿಲ್ಲವೇ? "

"ಇಲ್ಲ, ಯಾವ ಪ್ರತಿಕ್ರಿಯೆಯೂ ಬರಲಿಲ್ಲ " ಎಂದನು ಆ ಭಕ್ತ.

ಸಂತನೆಂದ : "ಸರಿ, ನೀನೂ ಮರಣಶೀಲನೆಂದು ತಿಳಿ. ಮರಣಾವಸ್ಥೆಯಲ್ಲಿ ಹೊಗಳಿಕೆ ತೆಗಳಿಕೆಗಳೆರಡೂ ಸಮಾನ. ನೀನು ಜೀವಿಸಿರುವಾಗಲೂ ಹಾಗೆಯೇ ಇರಲು ಸಾಧ್ಯವಾದರೆ ಅದೇ ಮುಕ್ತಿಯ ಮಾರ್ಗ. ಮಾನ ಅಪಮಾನ ಗಳಿಗೆ, ಹೊಗಳಿಕೆ ತೆಗಳಿಕೆಗಳಿಗೆ ನೀನು ಪ್ರತಿಕ್ರಿಯಿಸದಿರಲು ಸಾಧ್ಯವಾದರೆ ನೀನು ಮುಕ್ತಿಯನ್ನು ಪಡೆಯುತ್ತೀಯೆ "



ಕಲೆ : ಪುರುಷೋತ್ತಮ ಕಾರಂತ